



# ಮರಗಳ ಮಹಾರಾಜ

# ಮದ್ದಾಲೆ

ಎಷ್ಟೇ ನಟರಿದ್ದರೂ ಮಹಾರಾಜನ ಪಾತ್ರ ನಮ್ಮ ರಾಜಕುಮಾರ್‌ಗೆ ಮಾತ್ರ ಒಪ್ಪುವಂತೆ, ಎಷ್ಟೇ ಎತ್ತರದ ಮರಗಳಿದ್ದರೂ 'ಎಂಥ ರಾಜಗಾಂಭೀರ್ಯ!' ಎಂದು ಮದ್ದಾಲೆಯನ್ನು ನೋಡಿದಾಗ ಮಾತ್ರ ಅನ್ನಿಸಲು ಸಾಧ್ಯ. ಅಂಥ ವರ್ಚಸ್ಸು ಈ ಮದ್ದಾಲೆಯದ್ದು.

■ ವಿನು ಗಂಗೆ

ಭಾರತದ ಪ್ರಧಾನಿ ರಾಜೀವ್ ಗಾಂಧಿ ಹಾಗೂ ರಷ್ಯಾ ಅಧ್ಯಕ್ಷ ಗೊರ್ಬಚೆವ್ ಆಗಿದ್ದ ಕಾಲದಲ್ಲಿ ಭಾರತ–ರಷ್ಯಾದ ಸ್ನೇಹ ಸಂಬಂಧ ಎಷ್ಟಿತ್ತೆಂದರೆ– ಬ್ಯಾಲೆ ನೃತ್ಯ, ರಷ್ಯನ್ ನಾಟಕಗಳು ನಮ್ಮ ದೇಶದಲ್ಲಿ; ಭರತನಾಟ್ಯ, ಯಕ್ಷಗಾನ ರಷ್ಯಾದಲ್ಲಿ, ಹೀಗೆ ಪರಸ್ಪರ ಸಾಂಸ್ಕೃತಿಕ ಕಾರ್ಯಕ್ರಮಗಳ ಅನೇಕ ಉತ್ಸವಗಳು ನಡೆಯುತ್ತಿದ್ದವು. ಬೇಕಾದಷ್ಟು ರಷ್ಯನ್ ಪುಸ್ತಕಗಳು ಇಂಗ್ಲಿಷ್ ಹಾಗೂ ಕನ್ನಡದ ತರ್ಜುಮೆಯಲ್ಲಿ ದೊರೆಯುತ್ತಿದ್ದವು.

ರಷ್ಯನ್ ಮಕ್ಕಳ ಕಥೆಗಳ ಹಲವಾರು ಪುಸ್ತಕಗಳನ್ನು ನಮ್ಮ ಅಪ್ಪ ತರುತ್ತಿದ್ದರು. ನಮ್ಮ 'ಚಂದಮಾಮ', 'ಬೊಂಬೆಮನೆ'ಯಂತೆ ಕಲ್ಪನಾಲೋಕಕ್ಕೆ ಕರೆದೊಯ್ಯುವ ಆ ಕಥೆಗಳು ಈಗಲೂ ಅಚ್ಚಳಿಯದೆ ಮನದಲ್ಲಿವೆ. ಅಂತಹ ಒಂದು ಕಥೆಯಲ್ಲಿ ನನಗೆ ಬಲು ಇಷ್ಟವಾದ ಕತೆ ಹೀಗಿದೆ:

ಒಂದು ಊರಿನಲ್ಲಿ ಅನಾಥ ಅಣ್ಣ ತಂಗಿ ಇರುತ್ತಾರೆ. ಅವರೊಂದಿಗೆ ಒಂದು ಕೋಳಿಯೂ ಇರುತ್ತದೆ. ಒಂದು ದಿನ ತಂಗಿ ಅಂಗಳದ ಕಸ ಗುಡಿಸುವಾಗ ಅವಳಿಗೆ ಬೀಜವೊಂದು ಸಿಗುತ್ತದೆ. ಅವಳು ಅದನ್ನು ಹಿತ್ತಲಲ್ಲಿ ಬಿತ್ತುತ್ತಾಳೆ. ಮಾರನೇ ದಿನ ಬೆಳಿಗ್ಗೆ ಎದ್ದು ನೋಡಿದರೆ ಹಿತ್ತಲಲ್ಲಿ ಆಕಾಶದೆತ್ತರಕ್ಕೆ ಮರವೊಂದು ಬೆಳೆದಿರುತ್ತದೆ. ಮೋಡ ಮುಟ್ಟುವ ಎತ್ತರಕ್ಕೆ ಬೆಳೆದ ಮರವನ್ನು ಅಣ್ಣನಿಗೆ ತೋರಿಸಿದ ತಂಗಿ, 'ಮೇಲೆ ಹಣ್ಣು ಸಿಗಬಹುದು ತಿನ್ನಲು ತಾ' ಎನ್ನುತ್ತಾಳೆ. ಅಣ್ಣ ಮರ ಹತ್ತಿ ನೋಡಿದರೆ ಅಲ್ಲಿ ಒಕ್ಕಣ್ಣಿನ ಮಾಟಗಾತಿಯ ಲೋಕ ಇರುತ್ತದೆ. ಅವಳ ಹತ್ತಿರ ಬೇಕೆನಿಸುವ ತಿಂಡಿ ಕೊಡುವ ಮಾಯದ ಬೀಸುವ ಕಲ್ಲು ಇರುತ್ತದೆ. ಹೀಗೆ ಮುಂದುವರೆಯುವ ಆ ಕಥೆ ಕೊನೆಗೆ ಆ ಊರಿನ ಕೆಟ್ಟ ತ್ಸಾರ್‌ನನ್ನು (ರಾಜನನ್ನು) ಆ ಮಕ್ಕಳು ಕೋಳಿಯ ಸಹಾಯದಿಂದ ಸೋಲಿಸುವಲ್ಲಿ ಸುಖಾಂತ್ಯವಾಗುತ್ತದೆ.

ಇಷ್ಟು ಹೊತ್ತಿಗಾಗಲೇ ನಿಮಗೆ ಗೊತ್ತಾಗಿರಬಹುದು, ನಾನು ಎತ್ತರದ ಮರವೊಂದರ ಕಥೆ ಹೇಳುತ್ತಿದ್ದೇನೆ ಎಂದು. ನಿಜ, ಎತ್ತರದ ಮರದ ಮೇಲೆ ಮಾಯದ ಲೋಕ ಇರುತ್ತದೆ ಎಂಬ ಕಲ್ಪನೆಗೆ ರಷ್ಯಾದಲ್ಲಿ ಓಕ್ ಮರಗಳು ಇಂಬು ಕೊಟ್ಟರೆ, ಭಾರತದಲ್ಲಿ ಈ ಕಲ್ಪನೆಗೆ ಇಂಬು ಕೊಡಲು ಸಾಧ್ಯ ಇರುವುದು ಮದ್ದಾಲೆ ಮರಕ್ಕೆ ಮಾತ್ರ.

ಮದ್ದಾಲೆಗಿಂತ ಬೇರೆ ಎತ್ತರದ ಮರಗಳು ಇಲ್ಲವೆಂದಲ್ಲ. ಆದರೆ ಮದ್ದಾಲೆ ಮರವನ್ನು ಕೇವಲ ಅಗಾಧ ಎತ್ತರದ ಮರ ಎಂದಷ್ಟೇ ಹೇಳಿದರೆ ಏನೂ ಹೇಳಿದಂತಾಗುವುದಿಲ್ಲ. ಎಷ್ಟೇ ನಟರಿದ್ದರೂ ಮಹಾರಾಜನ ಪಾತ್ರ ನಮ್ಮ ರಾಜಕುಮಾರ್‌ಗೆ ಮಾತ್ರ ಒಪ್ಪುವಂತೆ, ಎಷ್ಟೇ ಎತ್ತರದ ಮರಗಳಿದ್ದರೂ 'ಎಂಥ ರಾಜಗಾಂಭೀರ್ಯ!' ಎಂದು ಮದ್ದಾಲೆಯನ್ನು ನೋಡಿದಾಗ ಮಾತ್ರ ಅನ್ನಿಸಬಹುದು.

